ಬಾಡಿ' ಕಾರಣವಾಗಿಯೇ ಸಾವಾಗಿದೆ. ಇದನ್ನು ಕಾಕತಾಳೀಯ ಎನ್ನುತ್ತಿಯಾ?'

'ಸಾರ್! ಅಖಿಲಾಳ ಸಾವಿಗೆ ನಾನು ಮಾತ್ರ ಕಾರಣನಲ್ಲ ತಿಳಿದುಕೊಳ್ಳಿ. ಅದನ್ನು ಪ್ರೂವ್ ಮಾಡಲು ನಿಮ್ಮ ಹತ್ರ ಯಾವುದೇ ಸಾಕ್ಷಿಗಳಿಲ್ಲ. ಕಮಾನ್! ಯು ಕೆನ್ ಗೋ ನೌವ್' ಅಖಿಲೇಶ್ ಸಿಡುಕಿದ.

'ನೋಡು! ನೋಡು! ಬೇಡ! ಬೇಡ! ಕಾನೂನನ್ನು ನಿನ್ನ ಕೈಗೆ ತಗೋಬೇಡ ದಟ್ ಈಜ್ ಟೂ ಡೇಂಜರಸ್. ಇಷ್ಟಕ್ಕು ಅಂದು ನೀನು ಧರಿಸಿದ್ದ ರಗ್ಜೀನ್ ಜಾಕೆಟ್ ಸುಟ್ಟಿರುವುದು ಹಾಗೂ ಸುಟ್ಟ ಸಿಗರೇಟ್ ಲೈಟರ್ ಇವು ಅಖಿಲಾಳ ಕಾಲಿನ ಕೆಳಗಡೆ ಸಿಕ್ಕಿವೆ' ಎನ್ನುತ್ತಾ ಅವನನ್ನು ಸ್ವಲ್ಪ ಸಡಿಲಿಸಿರು ರೆವರೆಂಡ್.

'ಸಾರ್! ನಾನ್‌ಸೆನ್ಸ್ ಎಲ್ಲಾ ಮಾತಾಡ್ಬೇಡಿ! ಅಖಿಲಾಗೆ ಐಸ್‌ಕ್ರೀಂ ತರಲು ಕಾರಿಳಿದು ಹೋಗುವಾಗ ಜಾಕೆಟನ್ನು ಕಾರಲ್ಲೇ ಬಿಟ್ಟು ಹೋಗಿದ್ದೆ. ಜೇಬಲಿದ್ದ ಲೈಟರ್ ಕೆಳಗಡೆಗೆ ಬಿದ್ದಿರಬಹುದು...'

'ನೋಡು ಯಾವುದೇ ಕೊಲೆಗಾರ ಎಷ್ಟೇ ತೀಕ್ಷ್ಣಬುದ್ಧಿ, ಜಾಣತನದಿಂದ, ಸುಳಿವು ಸಿಗದಂತೆ ಕೊಲೆ ಮಾಡಿದ್ದರೂ ತನಗೇ ಅರಿವಿಲ್ಲದಂತೆ ಎಲ್ಲೊ ಒಂದು ಸಣ್ಣ ಸುಳಿವನ್ನು ಬಿಟ್ಟು ಹೋಗಿರುತ್ತಾನೆ ಎಂಬ ಸತ್ಯ ನಿನಗೆ ಗೊತ್ತು ತ್ತಾನೆ?'

'ಇರಬಹುದು! ಆದರೆ, ಬರಿ ಹೇಳಿಕೆಗಳನ್ನು ಕೋರ್ಟ್ ಒಪ್ಪುವುದಿಲ್ಲ. ಕೋರ್ಟ್‌ಗೆ ಬೇಕಾಗಿರುವುದು ಬಲವಾದ ಸಾಕ್ಷ್ಯಾಧಾರಗಳು. ಮೆಟೀರಿಯಲ್ ಪ್ರೂಫ್ ಅಂಡ್ ವಿಟ್‌ನೆಸ್ಸೆಸ್. ಅದೇ ನಿಮ್ಮಲ್ಲಿಲ್ಲವಲ್ಲಾ!' ಎಂದ.

ಮೂಕವಿಸ್ಮಿತರಾದರು ರೆವರೆಂಡ್!

ಅಷ್ಟರಲ್ಲೇ ರೆವರೆಂಡರ ಮೊಬೈಲ್ ರಿಂಗಾಯಿತು. ಫೋನ್ ತೆರೆದು ನೋಡಿದರು. ಅದು ಇನ್‌ಸ್ಪೆಕ್ಟರ್ ವಿಜಯ್ ಕರೆಯಾಗಿತ್ತು. ಕಿವಿಗೆ ಆನಿಸಿಕೊಂಡು 'ಹೇಳಿ ಸಾರ್' ಎಂದರು ರೆವರೆಂಡ್'.

ಸುಮಾರು ಹತ್ತು ನಿಮಿಷ ಸಂಭಾಷಣೆಯಲ್ಲಿ ತೊಡಗಿದರು. ರೆವರೆಂಡ್ ಕೇವಲ 'ಓಹೋ', 'ಹೌದಾ', 'ಅರೆ', 'ಎಕ್ಸಲೆಂಟ್', 'ಸರಿ', 'ಇಲ್ಲ', 'ಓಕೆ', 'ಖಂಡಿತಾ' ಇತ್ಯಾದಿ ಪದಗಳಿಂದಲೇ ಹತ್ತು ನಿಮಿಷ ಮಾತಾಡಿ ಸಂಭಾಷಣೆ ಮುಗಿಸಿದ್ದರು.

ಏನೂ ಅರ್ಥವಾಗದೆ ಅಖಿಲೇಶ್ ಮಂಕಾಗಿ ಕಕ್ಕಾಬಿಕ್ಕಿಯಾದ.

ರೆವರೆಂಡ್ ಸ್ವಲ್ಪ ಸಮಯ ಸುಧಾರಿಸಿಕೊಂಡು, 'ನೋಡಿದೆಯಾ ಅಖಿಲೇಶ್! ನಾನು ಈಗ ತಾನೇ ಹೇಳಿದ್ದೆ ಕೊಲೆಗಾರ ತಾನೆಷ್ಟೇ ಚಾಣಾಕ್ಷತನದಿಂದ ಕೊಲೆ ಮಾಡಿದ್ದರೂ ಸಣ್ಣ ಸುಳಿವು ತನಗರಿವಿಲ್ಲದಂತೆ ತನ್ನ ಹಿಂದೆ ಬಿಟ್ಟು ಹೋಗಿರುತ್ತಾನೆ ಅಂತ! ಆ ಮಾತು ನಿನ್ನ ಕೇಸಲ್ಲೂ ಸತ್ಯವಾಗಿದೆ ಅಹ್ಹಾಹ! ಅಹ್ಹಾಹ!' ಎಂದು ನಗುತ್ತಾ ಹೇಳಿದರು.

'ಏನು!? ಏನು!?' ಗದ್ಗದಿತ ದನಿಯಿಂದ ಕೇಳಿದ ಅಖಿಲೇಶ್.

'ತಡಕೋ! ತಡಕೋ! ಇನ್ನು ಕೇವಲ ಹತ್ತು ನಿಮಿಷ ತಡಕೋ. ಅಣ್ಣನ ಬಣ್ಣ ಎಲ್ಲ ಹೊರಕ್ಕೆ ಬರುತ್ತೆ!' ಎಂದರು ರೆವರೆಂಡ್

ಹತ್ತೇಹತ್ತು ನಿಮಿಷಗಳಲ್ಲಿ ಇನ್‌ಸ್ಪೆಕ್ಟರ್ ವಿಜಯ್ ಬಂದರು. ವಿಜಯ್ ಬಂದವರೇ ನೇರವಾಗಿ ಅಖಿಲೇಶ್‌ನನ್ನು, 'ಯು ಆರ್ ಅಂಡರ್ ಅರೆಸ್ಟ್! ಎಫ್.ಐ.ಆರ್. ಆಗಲೇ ಸಿದ್ಧವಾಗಿದೆ ನಡಿ!' ಎನ್ನುತ್ತಾ ಅವನ ಕೈಗೆ ಕೋಳ ತೊಡಿಸಿದರು.